ಉದಯವಾಣಿ
ಕನ್ನಡ ದಿನಪತ್ರಿಕೆ

ವಾರ್ಷಿಕ ಕ್ರೀಡಾಕೂಟ: ಜೈನ್ ವಿವಿಗೆ ಪ್ರಶಸ್ತಿ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ನಗರದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆದ ರಾಷ್ಟ್ರೀಯ ವಾರ್ಷಿಕ ಕ್ರೀಡಾಕೂಟ 'ಏಷಾ -2014' ರಲ್ಲಿ ಸಮಗ್ರ ಪ್ರಶಸ್ತಿ ಭಾಜನಕೊಂಡಿದೆ.

ಗುರುವಾರ ಅಂತ್ಯಗೊಂಡ ಕೂಟದಲ್ಲಿ ಜೈನ್ ವಿವಿ ಐದು ವಿಭಾಗಗಳಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರೆ, ಎರಡು ವಿಭಾಗದಲ್ಲಿ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು.

ಜೈನ್ ವಿವಿ ತಂಡ, ಈಜು (ಪುರುಷರ ಮತ್ತು ಮಹಿಳಾ), ಟೆನಿಸ್ (ಮಹಿಳಾ), ಟೇಬಲ್ ಟೆನಿಸ್ (ಮಹಿಳಾ), ಬ್ಯಾಡ್ಮಿಂಟನ್ (ಮಹಿಳಾ), ಬಾಸ್ಕೆಟ್ ಬಾಲ್ (ಮಹಿಳಾ) ವಿಭಾಗದಲ್ಲಿ ಪ್ರಶಸ್ತಿ ಒಯ್ದರೆ, ಪುರುಷರ ವಿಭಾಗದಲ್ಲಿ ಬಾಸ್ಕೆಟ್ ಬಾಲ್ ಮತ್ತು ಬ್ಯಾಡ್ಮಿಂಟನ್‌ನಲ್ಲಿ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಮಹಿಳಾ ವಿಭಾಗದ ಬಾಸ್ಕೆಟ್ ಬಾಲ್ ಫೈನಲ್‌ನಲ್ಲಿ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಚೆನ್ನೈನ ಎಂಒಪಿ ತಂಡ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು.

ಉಳಿದಂತೆ ಪುರುಷರ ಬಾಸ್ಕೆಟ್ ಬಾಲ್ ಫೈನಲ್‌ನಲ್ಲಿ ಚೆನ್ನೈನ ಓಂದೂ ಸ್ಥಾನ್ ವಿವಿ 94-88 ಅಂತರದಿಂದ ಬೆಂಗಳೂರಿನ ಜೈನ್ ವಿವಿಯನ್ನು ಮಣಿಸಿದರೆ, ಕ್ರಿಕೆಟ್‌ನಲ್ಲಿ ಮಿಂಟೊ ಸ್ಥಾನ್ ವಿವಿ ವಿರುದ್ಧ ಮಂಗಳೂರಿನ ಅಳ್ವಾಸ್ ಗೆಲುವು ಸಾಧಿಸಿತು.

ಮಾಲಿಬಾಲ್‌ನಲ್ಲಿಚೆನ್ನೈನ ವಿಐಟಿಎಸ್ ವಿವಿ ವಿರುದ್ಧ ಚೆನ್ನೈನ ಸತ್ಯಭಾಮ ವಿವಿ ಹಾಕಿಯಲ್ಲಿಚೆನ್ನೈನ ಡಿಜಿ ಜೈನ್ ಕಾಲೇಜು ವಿರುದ್ಧ ಬೆಂಗಳೂರು ಸುದಾನ ಕಾಲೇಜು ತಂಡ, ಟೆನಿಸ್‌ನಲ್ಲಿ ಚೆನ್ನೈನ ಓಂದೂಸ್ಥಾನ್ ವಿವಿ ಎದುರು ಬೆಂಗಳೂರಿನ ಎಸ್ ಜೆ ಸಿಇ ಕಾಲೇಜು ತಂಡ ಗೆಲುವು ಸಾಧಿಸಿದವು.

ವಾರ್ಷಿಕ ಕ್ರೀಡಾಕೂಟದ ಬಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಜೈನ್ ವಿಶ್ವವಿದ್ಯಾಲಯದ ಮಹಿಳಾ ತಂಡ.